ನಿನ್ನೆ ಸಾಯಂಕಾಲ ಕಳುಹಿಸಿ ಕೊಟ್ಟಿದ್ದಾರೆ. ಇನ್ನೊಂದು ನಿಲುವಳಿ ಸೂಚನೆಯನ್ನು ಮಾನ್ಯ ಸದಸ್ಯರಾದ ಭೈರೇಗೌಡರು ನಿನ್ನೆ ಸಾಯಂಕಾಲ ಕಳುಹಿಸಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ತಾವು ನಿಲುವಳಿ ಸೂಚನೆಯನ್ನು ಇವತ್ತು ಬೆಳಗ್ಗೆ ನನಗೆ ಕಳುಹಿಸಿ ಕೊಟ್ಟಿದ್ದೀರಿ. ಮೂರು ನಿಲುವಳಿ ಸೂಚನೆಗಳ ಬಗ್ಗೆ ನಾವೀಗ ತೀರ್ಮಾನ ಮಾಡಬೇಕಾಗಿದೆ. ಇದಕ್ಕೆ ಮೊದಲು ಗಮನ ಸೆಳೆಯುವ ಸೂಚನೆಯನ್ನು ಮುಂಗಿಸಿ ಅವುಗಳ ಬಗ್ಗೆ ನಂತರ ನಾವು ನಮ್ಮ ಗಮನ ಹರಿಸಬಹುದು.

೨) ಜಿಲ್ಲಾ ವ್ಯಾಪ್ತಿಯೊಳಗೆ ಬರತಕ್ಕ ೩ ಸಾವಿರ ಶಿಕ್ಷಕರ ನೇಮಕಾತಿ ರದ್ದು ಮಾಡತಕ್ಕ ಸರ್ಕಾರಿ ನಿರ್ಣಯದ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).— ಮಾನ್ಯ ಅಧ್ಯಕ್ಷರೆ, ನಿಯಮಾವಳಿಯಂತೆ ನಿಲುವಳಿ ಸೂಚನೆ ಉಳಿದೆಲ್ಲ ಸೂಚನೆಗಳಿಗಿಂತ ಅಧ್ಯತೆ ಪಡೆಯುತ್ತದೆ. ಕಾರಣವೇನೆಂದರೆ ನಿಲುವಳಿ ಸೂಚನೆಯನ್ನು ತೆಗದುಕೊಳ್ಳಬೇಕೇ ಬೇಡವೇ ಎನ್ನುವುದು ಮೊದಲನೆಯ ಪ್ರಶ್ನೆ. ಆ ಪ್ರಶ್ನೆಯನ್ನು ತಾವು ನಿರ್ಣಯ ಮಾಡಿದ ಮೇಲೆ ಸದನದ ಉಳಿದ ವಿಚಾರಗಳನ್ನು ಕೈಗೆತ್ತಿಕೊಳ್ಳಬಹುದು. ನಾನು ಮೊದಲು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ ಅದರ ಆಡ್ಮಿಸಬಲಿಟಿ ಬಗ್ಗೆ ತಾವು ಕೇಳಬಹುದು. ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆ, ಈ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮೊದಲ ಮಂತ್ರಿ ಮಂಡಲ ಸಭೆಯಲ್ಲಿ ಸುಮಾರು ೩ ಸಾವಿರ ಜನ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯೊಳಗೆ ನೇಮಕ ಮಾಡಿದ ಶಿಕ್ಷಕರ ಬಗ್ಗೆ ಒಂದು ನಿರ್ಣಯವನ್ನು ಕೈಗೊಂಡಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ನಾನು ಇನ್ನೇ ಅಧಿವೇಶನವನ್ನು ನಿಲುವಳಿ ಸೂಚನೆಯಿಂದ ಪ್ರಾರಂಭ ಮಾಡಬೇಕೆನ್ನುವ ಇಚ್ಛೆ ಇರಲಿಲ್ಲ. ಅದು ಸದನದ ದೃಷ್ಟಿಯಲ್ಲಿ ಸರಿ ಅಂದುಕೊಂಡಿಲ್ಲ. ಈ ಒಂದು ಅಸ್ತ್ರವನ್ನು ವಿಶೇಷವಾದ ಸಂದರ್ಭದಲ್ಲಿ ಬಳಸಬೇಕು ಎನ್ನುವ ಸಂಪ್ರದಾಯಕ್ಕೆ ಬದ್ಧನಾಗಿರುವವನು ನಾನು ಆದರೆ ದುರದೃಷ್ಟವಶಾತ್ ಆಳುವ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಮಂಡಲದ ಮೊದಲ ತೀರ್ಮಾನ ನಮ್ಮ ರಾಜ್ಯದಲ್ಲಿ ಒಂದು ದೊಡ್ಡ ಗೊಂದಲವನ್ನು ಎಬ್ಬಿಸಿದೆ. ಮುಖ್ಯವಾಗಿ ಸುಮಾರು ೩ ಸಾವಿರ ಉಪಾಧ್ಯಾಯರನ್ನು ಜಿಲ್ಲಾ ಪರಿಷತ್‌ನವರು ನೇಮಕ ಮಾಡುವುದರ ಮೂಲಕ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತಹ ಒಂದು ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದ್ದರು. ಆ ಪ್ರಯತ್ನಕ್ಕೆ ಕೊಡಲಿ ಏಟನ್ನು ಈ ನಿರ್ಣಯ ಅಥವ ತೀರ್ಮಾನ ಕೊಟ್ಟಿದೆ. ಮೊದಲನೆಯದಾಗಿ ನಾವು ಡಿಸೆಂಬರ್ ಕೊನೆಯ ಹಂತದಲ್ಲಿದ್ದೇವೆ. ಇನ್ನು ಎರಡು ತಿಂಗಳುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕ ಮಕ್ಕಳು ತಮ್ಮ ಪರಿಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುವ ಹಂತದಲ್ಲಿ ಇದ್ದ ಉಪಾಧ್ಯಾಯರನ್ನು ಕಳೆದುಕೊಂಡು ಇಡೀ ಗ್ರಾಮಾಂತರ ಪ್ರದೇಶಗಳ ಶಾಲೆಗಳಲ್ಲಿರತಕ್ಕ ಮಕ್ಕಳನ್ನು ಮತ್ತು ಅವರ ತಂದೆ ತಾಯಿಗಳನ್ನು ಅತೀವವಾದ ಗೊಂದಲದಲ್ಲಿ ನಾವು ಕೆಡವಿದ್ದೇವೆ, ಎರಡನೆಯದಾಗಿ ನಾನು ಈ ಸರ್ಕಾರ ಈ ರೀತಿ ಮಾಡುತ್ತದೆಂದು ಅಂದುಕೊಂಡಿರಲಿಲ್ಲ. ಇದು ಜನರ ಪರವಾಗಿ, ಜನರ ಸಲುವಾಗಿ ಒಳ್ಳೆಯ ಕೆಲಸ ಮಾಡುತ್ತದೆಂದೂ ಜನರ ಹಿತದಿಂದ ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ ಎನ್ನುವ ನನ್ನ ಅನಿಸಿಕೆ ಇದರಿಂದಾಗಿ ನುಚ್ಚು ನೂರಾಗಿದೆ. ಇದು ಬಡ ಶಿಕ್ಷಕರ ಹೊಟ್ಟೆಯ ಮೇಲೆ ಹೊಡೆಯತಕ್ಕ ಮೊದಲನೆಯ ತೀರ್ಮಾನ. ಎರಡನೆಯದಾಗಿ ಜಿಲ್ಲಾಪರಿಷತ್ತಿನ ಸ್ವಾಯತ್ತತೆ ಬಗ್ಗೆ ಏನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ ಅದು ಒರುವುದಕ್ಕೆ ಮುಂಚೆ ಸ್ವಾಯತ್ತತೆಗೆ ವಿಕೇಂದ್ರೀಕರಣ ವ್ಯವಸ್ಥೆಗೆ ಗಧಾಪ್ರಹಾರ ಮಾಡಿ ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಆದರ ಪರಿಣಾಮ ಇಡೀ ರಾಜ್ಯದ ಸುಮಾರು ಆರೇಳು ಜಿಲ್ಲೆಗಳಲ್ಲಿ ನೂರಾರು ಶಾಲೆಗಳು ಸಾವಿರಾರು ಮಕ್ಕಳು ೩ ಸಾವಿರ ಜನ ಉಪಾಧ್ಯಾಯರು ನಿರುದ್ಯೋಗಿಗಳಾಗುವ ಸ್ಥಿತಿಯಿದೆ. ಆ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇದು ನಿನ್ನೆ ನಿಯಮಾವಳಿ ಒಳಗೆ ಬರುತ್ತದೆ. ಇದು ಮುಖ್ಯವಾಗಿರತಕ್ಕ ವಿಷಯ. ಈ ನಿಲುವಳಿ ಸೂಚನೆ ಹಕ್ಕಿನ ವ್ಯಾಪ್ತಿಯೊಳಗೆ ಬರುತ್ತದೆನ್ನುವ ರೀತಿಯಲ್ಲಿ ನಾನು ತಪಂಗೆ ಮನವರಿಕೆ ಮಾಡುತ್ತೇನೆ, ಮುಂಖ್ಯವಾದಂಥ ಒಂದು ನಿಲುವಳಿ ಸೂಚನೆ ಇತ್ತೀಚೆಗೆ ನಡೆದಂಥ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರಬೇಕು. ಈ ವ್ಯಾಪ್ತಿಯೊಳಗೆ ಅದು ಬರುತ್ತದೆ.

> **''ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯ ಕಾಲಾಪಗಳ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು''**

ಈಗ ಸರ್ಕಾರ ತೆಗೆದುಕೊಂಡಿರತಕ್ಕಂಥ ತೀರ್ಮಾನದಿಂದ ಆಗತಕ್ಕಂಥ ಪರಿಣಾಮವನ್ನು ನಾವು ನೋಡಬೇಕಾಗುತ್ತದೆ. ಈ ಹಿಂದೆ ಸಾರ್ವಜನಿಕರ ಹಿತಕ್ಕೆ ಧಕ್ಕೆಯಾಗುತ್ತದೆ ಎಂದು ಚರ್ಚೆಯಾದ ಎಲ್ಲಾ ವಿಷಯಗಳೂ ಈ ನಿಯಮಾವಳಿ ಒಳಗಡೆ ಬರುತ್ತವೆ. ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುವುದೇನೆಂದರೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು, ಇದನ್ನು ತೆಗೆದುಕೊಳ್ಳುವಾಗ ನಾವು ಮನುಷ್ಯರಾಗಿ ಗಮನಿಸಬೇಕಾದಂಥ ಅಂಶ ರಾಜ್ಯಾಂಗದ ಳಿಗೇ ವಿಧಿಯಲ್ಲಿ ಸುಮಾರು ೪೦ ವರ್ಷಗಳ ಹಿಂದೆ ನಾವು ಏನನ್ನು ಮಾಡಿಕೊಂಡಿದ್ದೇವೆ?

> "Article-45: provision for free and compulsory education for children. – The State shall endeavour to provide, within a period of ten years from the commencement of the Constitution, for free and compulsory education for all children until they complete the age of fourteen years."

ಇವತ್ತೂ ಕೂಡ ಈ ದೇಶದಲ್ಲಿ ಅಂಕಿಅಂಶಗಳ ಪ್ರಕಾರ ನೂರಕ್ಕೆ ೬೨ ಜನ ಅವಿದ್ಯಾವಂತರು ಇದ್ದಾರೆ. ಶೇಕಡಾ ೬೨ರಷ್ಟು ಜನ ಅವಿದ್ಯಾವಂತರು ಇನ್ನೂ ಇದ್ದಾರೆ ಎಂದು ಹೇಳುವಾಗ ನಾಚಿಕೆಯಿಂದ ನಾವು ತಲೆತಗಿಸಬೇಕಾಗುತ್ತದೆ. ಇದು ಆಗದೇ ಇರುವುದಕ್ಕೆ ನಾವು ಕೊಡುವ ಕಾರಣ ಮತ್ತು ನಮ್ಮಲ್ಲಿರ ತಕ್ಕಂಥ ಆರ್ಥಿಕ ಪರಿಸ್ಥಿತಿ.

ಅಧ್ಯಕ್ಷರು.— ಚರ್ಚೆಯನ್ನೇ ಪ್ರಾರಂಭಿಸಿದ್ದೀರಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ.— ನಾನು ಅವರಿಗೆ ವಂದನೆಗಳನ್ನು ಸಮರ್ಪಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು.— ನಿಮಗೆ ಸಾಕಷ್ಟು ಅವಕಾಶವನ್ನು ನಾನು ಕೊಟ್ಟಿದ್ದೇನೆ ಎಂದು ಬಾವಿಸುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು.— ನಾನಂ ಎದ್ದಿದ್ದೇನೆಂದು ಅವರಂ ಕೂಗಿತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ್ಯಪಕ್ಷದ ನಾಯಕರು ಪೈ ಮಾಫೇಸಿಯಾಗಿ ಇದು ನಿಲುವಳಿ ಸೂಚನೆಯಾಗುವುದಕ್ಕೆ ಎಲ್ಲಾ ಅರ್ಹತೆಗಳು ಇವೆ ಎಂಬ ವಾತನ್ನು ಅವರಂ ಮನದಟ್ಟು ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಪ್ರಾರಂಭದಲ್ಲೇ ಅಷ್ಟರ ಮಟ್ಟಿಗೆ ಚರ್ಚೆಗೆ ಹೋಗತಕ್ಕದ್ದು ಸಾಧುವಲ್ಲ ವೆಂದು ಅವರೂ ಕೂಡ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಈಗ ಮಾನ್ಯ ಮುಖ್ಯ ಮಂತ್ರಿಗಳು...

ಶ್ರೀ ಡಿ.ಬಿ. ಚಂದ್ರೇಗೌಡ.— ಅಧ್ಯಕ್ಷರೇ...

ಅಧ್ಯಕ್ಷರು.— ನೀವು ಹೇಳಬೇಕಾದ ವಿಚಾರವನ್ನು ಪೂರ್ತಿಯಾಗಿ ಹೇಳಿದ್ದೀರಿ. ಮೂರು ಸಾವಿರ ಶಿಕ್ಷಕರ ಬಗ್ಗೆ ನಿಮ್ಮ ಆಸಕ್ತಿಕೆಗಳನ್ನು ತಿಳಿಸಿದ್ದೀರಿ.

ಶ್ರೀ ಪಾಟೀಲ್ ನಾಗರಾಜ್ — ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ಮೂರು ದಿವಸಗಳವರೆಗೆ ಮಾತ್ರ ಈ ಸದನ ಸೇರುತ್ತಿದೆ. ಸರ್ಕಾರದವರು ಈ ಸದನಕ್ಕೂ ಅಗೌರವ ಮಾಡಿದ್ದಾರೆ. ಈ ಸದನಲ್ಲೇ ಅವರು ಹೇಳಬೇಕಾಗಿತ್ತು.

ನಮ್ಮ ನಿಲುವು ಏನು ಎಂದು ಏನು ಮೊದಲೇ ತಿಳಿಸಬೇಕಾಗಿತ್ತು. ಜಿಲ್ಲಾ ಪರಿಷತ್ತುಗಳು ಮಾಡಿದ ಶಿಕ್ಷಕರು ನೇಮಕಾತಿಯನ್ನು ರದ್ದು ಪಡಿಸಬೇಕೇ, ಬೇಡವೇ ಎಂದು ಅವರು ಹೇಳ ಬೇಕಾಗಿತ್ತು. ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಇದ್ದ ಸರ್ಕಾರ ಇವತ್ತು ಅನೇಕ ಹಳ್ಳಿಗಳಲ್ಲಿ ಸೂರೈತ್ತು ವಿದ್ಯಾರ್ಥಿಗಳಿಗೂ ಒಬ್ಬ ಶಿಕ್ಷಕರೂ ಇಲ್ಲ. ಜಿಲ್ಲಾ ಪರಿಷತ್ತುಗಳು ಅಧಿಕೃತವಾಗಿ ಆರ್ಡರ್ ಕೊಟ್ಟು ಅವರನ್ನು ನೇಮಕ ಮಾಡಿರುವಾಗ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಈ ಕೆಲಸ ಮಾಡುತ್ತದೆ ಎಂದು ನಾನಂ ಅಂದುಕೊಂಡಿರಲಿಲ್ಲ...

ಅಧ್ಯಕ್ಷರು.— ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆದರೆ ದುರಾದೃಷ್ಟವಶಾತ್ ಇದರ ಬಗ್ಗೆ ನೀವು ಸೂಚನೆ ಕೊಟ್ಟಿಲ್ಲ. ನಿಮ್ಮ ಹೆಸರು ಇದರಲ್ಲಿ ಇಲ್ಲ. ಆದ್ದರಿಂದ ಮೊದಲು ಯಾರು ಸೂಚನೆ ಕೊಟ್ಟಿದ್ದಾರೆ ಅವರಿಗೆ ಮಾತ್ರ ಅವಕಾಶ ಕೊಡತಕ್ಕದ್ದು ನ್ಯಾಯ.

ಶ್ರೀ ವಾಟಾಳ್ ನಾಗರಾಜ್. — ಮಾನ್ಯ ವಿರೋಧ ಪಕ್ಷದ ನಾಯಕರು ಈ ನಿಲುವಳಿ ಸೂಚನೆಯನ್ನು ತಂದ ಮಾತ್ರಕ್ಕೆ ಇದೇ ಸೂಚನೆಯ ಮೇಲೆ ನಾವು ಮಾತನಾಡಬಾರದು ಎಂದೇನೂ ಇಲ್ಲ. ಇದು ಗೋಪ್ಯವಾದುದು ಎಂದೇನೂ ತಿಳಿಯತಕ್ಕದ್ದು ಇಲ್ಲ. ತಾವು ಅಧ್ಯಕ್ಷರಿದ್ದೀರಿ, ತಮ್ಮ ಮೂಲಕವಾಗಿ ಮಾನವಿಯನ್ನು ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು. — ಇದು ಗೋಪ್ಯವಾದುದೆಂದು ಯಾವ ವಾದವೂ ಇಲ್ಲ. ಈಗ ಮುಖ್ಯಮಂತ್ರಿಗಳು ಮಾತನಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ. — ತಾವು ನನ್ನೆಲ್ಲರ ಸಲಹೆಗಳನ್ನು ಕೇಳಿಬಿಟ್ಟರೆ ಒಟ್ಟಿಗೆ ಉತ್ತರ ಹೇಳಿಬಿಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ. — ನನ್ನ ಪ್ರಾರ್ಥನೆ ಏನೆಂದರೆ, ಮಾನ್ಯ ಸಭಾನಾಯಕರು ಉತ್ತರ ಕೊಡುವುದರಲ್ಲಿ ನನ್ನ ಅಭ್ಯಂತರ ಇಲ್ಲ. ಇವತ್ತು ಜಿಲ್ಲಾಪರಿಷತ್ತುಗಳ ಮೇಲೆ ಸೇಡು ತೀರಿಸಿಕೊಳ್ಳತಕ್ಕ ರೀತಿಯಲ್ಲಿ ಅವರು ನೇಮಕ ಮಾಡಿಕೊಂಡ ೩ ಸಾವಿರ ಜನ ಶಿಕ್ಷಕರನ್ನು ಮನೆಗೆ ಕಳುಹಿಸಿಕೊಡುವ ಪ್ರಯತ್ನನಡೆಯುತ್ತಿದೆ. ಸರ್ಕಾರದ ಅನುಮತಿ ಈಗಾಗಲೇ ಅವರು ಬರೆದಿದ್ದಾರು. ಆದ್ದರಿಂದ ಸಭಾಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಅವರನ್ನು ಕೆಲಸದಿಂದ ತೆಗೆಯತಕ್ಕ ಕೆಲಸ ಏನು ನಡೆಯುತ್ತದೆ. ಅದನ್ನು ಮಾಡದೆ ಮುಂದುವರಿಸಿ, ಅವರು ಹಾಗೆಯೇ ಮುಂದುವರಿಯತಕ್ಕ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ. ಇದು ಅತ್ಯಂತ ಮಹತ್ವವಾದ ವಿಷಯ. ಇದಲ್ಲದೆ ಲಕ್ಷಾಂತರ ಜನ ರೈತರಿಗೆ ಸಂಬಂಧಪಟ್ಟ ವಿಷಯವನ್ನೂ ಕೂಡ ನಾನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು — ಈಗ ಯಾರೂ ಉತ್ತರ ಕೊಡತಕ್ಕ ಪರಿಸ್ಥಿತಿಗೆ ಬಂದಿಲ್ಲ. ನಾನು ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಹೇಳುತ್ತಾ ಇಲ್ಲ. ನಿಮ್ಮ ಪ್ರಶ್ನೆ ಆಂಗೀಕಾರಾರ್ಹವೋ ಅಥವಾ ಅಲ್ಲವೋ ಎಂಬ ಬಗ್ಗೆ ತಾವು ವಿಶ್ಲೇಷಣೆ ಮಾಡಿದ್ದೀರಿ. ಈಗ ಮಾನ್ಯ ಮುಖ್ಯಮಂತ್ರಿಗಳೂ ವಿಶ್ಲೇಷಣೆ ಮಾಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ಇದು ೩ ಸಾವಿರ ಜನ ಶಿಕ್ಷಕರು ಬೀದಿ ಪಾಲಾಗುವ ವಿಷಯ, ಅತ್ಯಂತ ಪ್ರಮುಖವಾದ ವಿಚಾರ...

ಶ್ರೀ ವಾಟಾಳ್ ನಾಗರಾಜ್. — ತೀವ್ರತರವಾಗಿ ಜೀವನ್ಮರಣದಲ್ಲಿರತಕ್ಕ ಆ ಶಿಕ್ಷಕರ ಬಗ್ಗೆ ಸರಿಯಾದ ಉತ್ತರ ಹೇಳಬೇಕಾಗಿದೆ...

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು). — ಮಾನ್ಯ ಸಭಾಧ್ಯಕ್ಷರೇ, ವಿರೋಧಪಕ್ಷದ ನಾಯಕರು ಒಪ್ಪಿದ್ದಾರೆ, ಮೊದಲನೇ ದಿವಸ ವಿರೋಧಪಕ್ಷದ ನಾಯಕರಾಗಿ ನಿಲುವಳಿ ಸೂಚನೆ ತರುವುದು ಹಿತವಲ್ಲ. ಆದರೆ, ಅಂತಹ ಪರಿಸ್ಥಿತಿ ಬಂದಿದೆ ತಂದಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾವ ವಿಷಯದ ಮೇಲೆ ನಿಲುವಳಿ ಸೂಚನೆ ತಂದಿದ್ದಾರೆ, ಅದನ್ನೇ ಇಬ್ಬರು ಮೂರು ಜನ ಮಾನ್ಯ ಸದಸ್ಯರು, ಆ ಕಡೆ ಕುಳಿತವರು ಪ್ರಸ್ತಾಪ ಮಾಡಿದ್ದಾರೆ. ನಿಲುವಳಿ ಸೂಚನೆ ತರುವುದಕ್ಕೆ ವಿರೋಧಪಕ್ಷದ ನಾಯಕರಿಗಾಗಲೀ ಅಥವಾ ವಿರೋಧಿ ಸದಸ್ಯರಿಗಾಗಲೀ ಆಧಾರ, ಪತ್ರಿಕೆಯಲ್ಲಿ ಬಂದಿರುವುದು. ಪತ್ರಿಕೆಯಲ್ಲಿ ಬಂದಿದೆ ಅದಕ್ಕಾಗಿ ನಿಲುವಳಿ ಸೂಚನೆ. ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಪತ್ರಿಕೆಯಲ್ಲಿ ಬಂದಿದ್ದನ್ನು ಆಧಾರ ಮಾಡಿ, ನಿಲುವಳಿ ಸೂಚನೆ, ತಂದು ಚರ್ಚೆ ಮಾಡುವುದಕ್ಕೆ ಹೊರಟರೆ, ಬಹುಶಃ ಇದಕ್ಕೆ ಯಾವುದೇ ಇತಿಮಿತಿ ಇರುವುದಿಲ್ಲ. ಇದಕ್ಕಾಗಿ ಅನೇಕ ಸಾಧನಗಳು ಇವೆ. ಇವತ್ತು ೩ ಸಾವಿರ ಜನ ಶಿಕ್ಷಕರು ನಿರುದ್ಯೋಗಿಗಳಾಗಿ ಬೀದಿಗೆ ಬಿದ್ದಿದ್ದಾರೆ ಎಂದು ಹೇಳುವುದಿಲ್ಲ ನಾವು ಅವರಿಗೆ ಟರ್ಮಿನೇಷನ್ ನೋಟೀಸ್ ಕೊಟ್ಟಿದ್ದೇವೆಯೇ ಪರಿಸ್ಥಿತಿ ಏನಾಗಿದೆ ಎನ್ನುವುದಕ್ಕೆ ತಿಳಿದುಕೊಳ್ಳುವುದಕ್ಕೆ ಮೊದಲೇ, ಇದನ್ನು ಊಹೆ ಮಾಡಿ, ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು ನೂರಕ್ಕೆ ನೂರಷ್ಟುಸತ್ಯಾಂಶ ಎಂಬ ಭಾವನೆಯ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆ ತಂದು ಚರ್ಚೆ ಮಾಡುವುದಕ್ಕೆ ಹೊರಟರೆ, ಬಹುಶಃ ಈ ಸಭೆಯ ಕಾಲವನ್ನು ಸಮ್ಮನೆ ಹರಣ ಮಾಡಿದಂತಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಷಯದಲ್ಲಿ ಸ್ಪಷ್ಟವಾಗಿ ವಿರೋಧಪಕ್ಷದ ಎಲ್ಲಾ ಸದಸ್ಯರಿಗೂ ಹೇಳುವುದಕ್ಕೆ, ಇಚ್ಛೆಪಡುತ್ತೇನೆ. ಪ್ರತಿಯೊಂದು ವಿಚಾರ, ಅದು ಜನಸಾಮಾನ್ಯರಿಗೆ ಸಂಬಂಧಪಟ್ಟಿದ್ದಾಗಲೀ, ನೌಕರರಿಗೆ ಸಂಬಂಧಪಟ್ಟಿದ್ದಾಗಲೀ, ಸಂಘಸಂಸ್ಥೆಗಳಿಗೆ ಸಂಬಂಧಪಟ್ಟಿದ್ದಾಗಲೀ ಅಥವಾ ಯಾವುದೇ ಸರ್ಕಾರದ ವ್ಯವಹಾರಗಳಾಗಲೀ ಚರ್ಚೆ ಮಾಡುವುದಕ್ಕೆ ನಾವೇನು ಹಿಂಜರಿಯುವುದಿಲ್ಲ ಮತ್ತು ಹಿಂದೆ ಮುಂದೆ ನೋಡುವುದಿಲ್ಲ. ಇದಕ್ಕಾಗಿಯೇ ನಿಯಮಗಳು ಇವೆ. ಆ ನಿಯಮಗಳ ಕೆಳಗೆ ಚರ್ಚೆ ಮಾಡಬೇಕು. ಇವತ್ತು ಒಮ್ಮೆ ನಿಲುವಳಿ ಸೂಚನೆ ತಂದರೆ, ಅದಕ್ಕೆ ಈಗಿಂದೀಗಲೇ

ಉತ್ತರ ಹೇಳಬೇಕೆನ್ನುವುದಲ್ಲ. ನೀವು ಹೇಳುವುದು ಬೇರೆ, ನಿಮ್ಮ ಆಧಾರ ಪತ್ರಿಕೆ, ನಾವು ಹೇಳುವ ವಿಚಾರ ಕಾನೂನು ರಹಿತವಾಗಿದೆಯೋ, ಕಾನೂನು ಚೌಕಟ್ಟಿನಲ್ಲಿದೆಯೋ, ಏನು ನಿರ್ಣಯ ಮಾಡಿದ್ದೇವೆ ಎಂಬುದನ್ನು ಸರಿಯಾಗಿ ಹೇಳಬೇಕು. ಈ ಮನೆಯಲ್ಲಿ ನಾವು ಏನು ಹೇಳುತ್ತೇವೆ ಒಂದೊಂದು ಅಕ್ಷರವೂ ಕೂಡ ಇಲ್ಲಿ ರೆಕಾರ್ಡ್ ಆಗುತ್ತದೆ. ನಾವು ಈ ಸದನವನ್ನು ತಪ್ಪು ದಾರಿಗೆ ಎಳೆದರೆ, ಈ ಮನೆಯು ಮಾನಭಂಗ ಮಾಡಿದಹಾಗೆ ಆಗುತ್ತದೆ. ಪ್ರಿವಿಲೇಜ್‌ಗೆ ಗುರಿಯಾಗುತ್ತೇವೆ. ಈ ಕಡೆ ಕಂಳಿತಿರತಕ್ಕಂಥ ಮಾನ್ಯ ಮಂತ್ರಿಗಳು ಮಾತನಾಡುವ ಒಂದೊಂದು ಶಬ್ದವನ್ನೂ ತೂಕದಿಂದ ಮಾತನಾಡಬೇಕಾಗುತ್ತದೆ, ಇವತ್ತು ೩ ಸಾವಿರ ಜನ ಶಿಕ್ಷಕರ ಗತಿ ಏನಾಗಿದೆ, ನಾವು ಏನು ನಿರ್ಣಯ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಇವತ್ತೇ ಹೇಳುವುದಕ್ಕೆ ಬರುವುದಿಲ್ಲ.

೧೧.೩೦ ಎ.ಎಂ.

ಆದರೆ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ಈ ಪ್ರಶ್ನೆ ನಿಲುವಳಿ ಪ್ರಶ್ನೆಯಾಗಬೇಕಾದ ಅವಶ್ಯಕತೆ ಇಲ್ಲ. ಮಾನ್ಯ ಸಭಾಧ್ಯಕ್ಷರೇ, ತಾವು ಬೇಕಾದರೆ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿರಿ. ನಾಳೆ ಡಿಟೇಲ್ ಆಗಿ ನಮ್ಮ ಸರಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂಬುದನ್ನು ಈ ಸದನದ ಮುಂದಿಡುತ್ತೇವೆ. ಬಹುಶಃ ಇದರಿಂದ ಅನೇಕ ಮಾನ್ಯ ಸದಸ್ಯರಿಗೆ ಅದರಿಂದ ಸಮಾಧಾನವಾಗುತ್ತದೆ, ಈ ತರಹದ ಚರ್ಚೆಗೆ ಅವಕಾಶ ಇರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಸಭಾನಾಯಕರು ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಪತ್ರಿಕೆಗಳು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಹೇಳಲಿಲ್ಲ. ಹಾಗೆಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪತ್ರಿಕೆಗಳು ಜನತಂತ್ರದ ನಾಲ್ಕನೇ ಅಂಗ. ಪತ್ರಿಕೆಗಳಲ್ಲಿ ಬರತಕ್ಕಂಥಾದ್ದು ವಸ್ತುಸ್ಥಿತಿ ಹೌದೇ ಅಲ್ಲವೇ ಎಂದು ಹೇಳಿ ನಿಖರವಾಗಿ ಹೇಳಬೇಕಾದವರು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡವರು. ಆದರೆ ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು ಬೇರೆಯವರು ಹೇಳಿದ ಮಾತಲ್ಲ. ಮಾನ್ಯ ವಾರ್ತಾ ಸಚಿವರಾದ ವೀರಪ್ಪ ಮೊಯಿಲಿಯವರು ಹೇಳಿರತಕ್ಕಂಥಾದ್ದು, ಬರೀ ಪತ್ರಿಕಾ ಹೇಳಿಕೆ ಅಲ್ಲ. ಪ್ರೆಸ್‌ಕಾನ್‌ಫರೆನ್ಸ್ ಕರೆದು ರಾಜ್ಯ ಕುರಿತ ಸಂಪುಟದ ನಿರ್ಧಾರವನ್ನು ಪ್ರಕಟ ಮಾಡಿದ್ದಾರೆ. ಹಾಗಿದ್ದರೆ ಪತ್ರಿಕೆಯವರು ಬೇಜವಾಬ್ದಾರಿಯಿಂದ ಇದನ್ನು ಬರೆದಿದ್ದಾರೆಯೇ ಎಂಬ ಪ್ರಶ್ನೆ ಏಳುತ್ತದೆ, ಪತ್ರಿಕೆಗಳಲ್ಲಿ ಬರುವುದು ನಿಲುವಳಿ ಸೂಚನೆ ಆಗುವುದಿಲ್ಲ, ಹಾಗೆ ಮಾಡಿದರೆ ಈ ಸಭೆಯ ಕಾಲಹರಣವಾಗುತ್ತದೆ ಎಂದರೆ, ನಾವು ಬೇಜವಾಬ್ದಾರಿಯಿಂದ ಕೆಲಸ ಮಾಡಿದಹಾಗೆ ಆಗುತ್ತದೆ ಎಂದು ಹೇಳಿದಹಾಗೆ ಆಗುತ್ತದೆ ಸಭಾನಾಯಕರು ಹೇಳಿದಹಾಗೆ, ನಮಗೆ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದು ಆಗಕೂಡದು. ನಾವೂ ಅಷ್ಟೇ ಜವಾಬ್ದಾರಿಯಿಂದ ಪತ್ರಿಕೆಗಳ ಮೇಲಿಡುವಷ್ಟು ನಂಬಿಕೆಯನ್ನು ಇಟ್ಟು, ಮಂತ್ರಿಮಂಡಲದ ವಾರ್ತಾ ಸಚಿವರು ಹೇಳಿದಂಥ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಈ ಸದನದಲ್ಲಿ ಎಷ್ಟು ತೂಕದಿಂದ ನಾವು ಮಾತನಾಡಬೇಕೆಂದು ತಾವು ಬಯಸುತ್ತೀರೋ, ಅದಕ್ಕಿಂತ ಒಂದು ಗುಲಗಂಜಿ ಹೆಚ್ಚು ತೂಕದಿಂದ ಮಾತನಾಡುವುದಕ್ಕೆ ಬಯಸುತ್ತೇವೆ. ಇಲ್ಲಿ ಯಾರ ಮಾನಭಂಗ ಮಾಡಬೇಕೆಂದಾಗಲೀ, ಸಭೆಯ ಕಾಲಹರಣ ಮಾಡಬೇಕೆಂದಾಗಲೀ, ನಮಗೆ ಪತ್ರಿಕಾ ವರದಿಯಷ್ಟೇ ಆಧಾರ ಎಂದಾಗಲೀ ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕೆಗಳಲ್ಲಿ ಬಂದ ವರದಿಯ ಮೇಲೆ, ಪುನಃ ವಾರ್ತಾ ಸಚಿವರು ಮಾಡಿದಂಥ ಹೇಳಿಕೆಯಮೇಲೆ ಹೇಳಿದ್ದೇವೆ, ಹಾಗಾದರೆ ಇನ್ನು ಮುಂದೆ ವಾರ್ತಾ ಸಚಿವರು ಹೇಳತಕ್ಕಂಥ ಪತ್ರಿಕಾ ಹೇಳಿಕೆಗಳು ನಂಬಿಕೆಗೆ ಅರ್ಹವಲ್ಲ ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಇದನ್ನು ನಾನು ಸಭಾ ನಾಯಕರ ಗಮನಕ್ಕೆ ತರುತ್ತೇನೆ. ಈ ಕಾರಣದಿಂದ ನಾವು ಈಗ ಯಾವುದರ ಮೇಲೆ ನಿಲುವಳಿ ಸೂಚನೆಯನ್ನು ತಂದಿದ್ದೇವೆ, ಅದನ್ನು ಪತ್ರಿಕಾ ವರದಿಯ ಭಾಗಕ್ಕೆ ಸೀಮಿತವಾಗಿ ತಂದಿದ್ದೇವೆಯೇ ಇಲ್ಲವೇ ಎಂದು ಅವರು ಮೊದಲೇ ಊಹೆ ಮಾಡಿದ್ದು ಸರಿಯಲ್ಲ ಎಂದು ತಮ್ಮ ಗಮನಕ್ಕೆ ತರುತ್ತೇನೆ. ನಾನು ಹೇಳಬೇಕಾದದ್ದು ಇಷ್ಟೇ, ಮಾನ್ಯ ರಾಜ್ಯಪಾಲರ ಭಾಷಣದ ಮೂರನೇ ಪುಟದಲ್ಲಿ ಒಂದು ಮಾತನ್ನು ಅವರು ಹೇಳಿದ್ದಾರೆ, "ಇನ್ನು ಸರ್ಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ. ಈ ಉದ್ದೇಶಕ್ಕಾಗಿ ರಚಿಸಲಾದಂತಹ ಸಂಸ್ಥೆಗಳನ್ನು ಸೂಕ್ತವಾಗಿ ಪುನಃ ಸಂಘಟಿಸಲಾಗುವುದು ಹಾಗೂ ಅವಶ್ಯವಿರುವಲ್ಲಿ ಅವುಗಳನ್ನು ಬಲಪಡಿಸಲಾಗುವುದು. ಹೀಗೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುವುದರಿಂದ ಸ್ಥಳೀಯ ಜನರ ಆಶೋತ್ತರಗಳನ್ನು ಹಾಗೂ ಅಗತ್ಯತೆಗಳನ್ನು ಈಡೇರಿಸಲಂ ಸಮರ್ಥವಾಗುತ್ತವೆ" ಸ್ಥಳೀಯ ಜನರ ಅಗತ್ಯತೆ ಎಂಬುದನ್ನು ನಾನು ಒಪ್ಪಿ ಹೇಳುತ್ತೇನೆ. ವಿದ್ಯಾಭ್ಯಾಸ ಸ್ಥಳೀಯ ಅಗತ್ಯತೆ ಅಲ್ಲವೇ, ಆದ್ಯತ ತಿಲ್ಲವೇ ? ಸ್ಥಳೀಯ ಅಗತ್ಯತೆ ಎಂಬ ಮಾತನ್ನು ತಾವು ಇಲ್ಲಿ ಬರೆದಿದ್ದೀರಿ. ಆದರೆ, ಜಿಲ್ಲಾಪರಿಷತ್ತುಗಳು ತೆಗೆದುಕೊಂಡ ನಿರ್ಣಯಗಳು ಜಿಲ್ಲಾಪರಿಷತ್ತಿನ ವ್ಯಾಪ್ತಿಯ ಒಳಗೆ ಇದೆಯೇ ಇಲ್ಲವೇ ಎಂಬುದನ್ನು ನಾವು ನೋಡಬೇಕು. ಜಿಲ್ಲಾಪರಿಷತ್ತಿನ ಶಾಸನದ ೧೮೨ನೇ ನಿಯಮದಲ್ಲಿ ಹೀಗೆ ಬರೆಯುತ್ತಾರೆ.

ಅಧ್ಯಕ್ಷರು.— ಡಿಟೈಲ್‌ಗೆ ಹೋಗಬೇಡಿ. ಅದರ ಮೆರಿಟ್ಸ್ ಮೇಲೆ ಹೋಗುತ್ತಿದ್ದೀರಿ. ಡಿಟೇಲ್ಸ್‌ಗೆ ಹೋಗುತ್ತಿದ್ದೀರಿ. ಅದರ ಕಡೆಗೆ ಇನ್ನೂ ನಾವು ಹೋಗಿಲ್ಲ. ಈಗ ನೀವು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.— ರಾಜ್ಯಪಾಲರ ಭಾಷಣವನ್ನು ಈ ಸದನದ ಮೇಜಿನ ಮೇಲೆ ಇಟ್ಟ ತಕ್ಷಣ ಅದು ಈ ಸದನದ ಸ್ವತ್ತಾಗುತ್ತದೆ.

ಅಧ್ಯಕ್ಷರು.— ಹಾಗಾದರೆ ಚರ್ಚೆಯ ಚೌಕಟ್ಟಿನಲ್ಲಿ ಅಲ್ಲಿ ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನೂ ಕೂಡಾ ಚರ್ಚೆಗೆ ತರಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಮಾತು ತಮ್ಮಿಂದ ಬರುತ್ತದೆ, ನಾನು ಅಲ್ಲಿ ಕುಳಿತಿದ್ದಾಗ ಹೇಳಿದಂತಹ ಮಾತು ವಾಪಸ್ ಬರುತ್ತದೆ ಎಂದು ಅಂದುಕೊಂಡೇ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಹಾಗೇನೂ ಇಲ್ಲ.

ಶ್ರೀ ಡಿ. ಬಿ. ಚಂದ್ರೆಗೌಡ.—ಈ ಕಾರಣದಿಂದಲೇ, ನನಗೆ ಉತ್ತರ ಬರಬಹುದು ಎಂಬ ಕಾರಣದಿಂದ ತಮ್ಮ ಗಮನಕ್ಕೆ ಇಷ್ಟೇ ತರುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಚರ್ಚೆಯಲ್ಲಿ ಉತ್ತರ ಹೇಳುವುದಕ್ಕೆ ಅವರಿಗೆ ಅನುಕೂಲವಾಗಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ ಈ ಮಾತನ್ನು ಏತಕ್ಕೆ ಇಲ್ಲಿ ಹೇಳಿದೆ ಎಂದರೆ, ಸ್ಥಳೀಯ ಆಶೋತ್ತರ ಅಗತ್ಯತೆಗಳು ಎಂದರೆ ವಿದ್ಯಾಭ್ಯಾಸ ಸ್ಥಳೀಯ ಅಗತ್ಯತೆ ಮತ್ತು ಆಶೋತ್ತರ ಆಗುತ್ತದೆಯೇ ಇಲ್ಲವೇ ? ಹಾಗೆ ಆಗುವುದಾದರೆ ನೀವು ನಿಜವಾಗಿ ಈ ಮಾತನ್ನು ಹೇಳಿದ್ದರೆ ಆತ್ಮಪೂರ್ವಕವಾಗಿ ಈ ಮಾತನ್ನು ಹೇಳಿದ್ದರೆ ಈ ಗಧಾಪ್ರಹಾರವನ್ನು ನೀವು ಮಾಡುವುದಕ್ಕೆ ಹೋಗುತ್ತಿರಲಿಲ್ಲ.

ಇದರಲ್ಲಿ ದೋಷವಿಲ್ಲವೆಂದು ನಾನು ಹೇಳುವುದಿಲ್ಲ. ಜಿಲ್ಲಾಪರಿಷತ್ತು ನಿಯಮಾವಳಿಗಳಲ್ಲಿ ತಾಂತ್ರಿಕ ದೋಷವಿರಬಹುದು. ಶಾಸನ ದೋಷವಿರಬಹುದು. ಆ ಪ್ರಶ್ನೆ ನಾನು ಮಾಡುವುದಿಲ್ಲ, ನಾನು ಪ್ರಶ್ನೆ ಮಾಡುತ್ತಿರುವುದೇನೆಂದರೆ ಜಿಲ್ಲಾಪರಿಷತ್ತು ವ್ಯವಸ್ಥೆಯಲ್ಲಿ ಅಧಿಕಾರದ ವಿಕೇಂದ್ರೀಕರಣ ಮಾಡಿ ಅದಕ್ಕೊಂದು ನಿಯಮಗಳನ್ನು ಮಾಡಿ, ಅಧಿಕಾರವನ್ನು ಕೊಟ್ಟು, ಅಧಿಕಾರದ ವ್ಯಾಪ್ತಿಯಲ್ಲಿ...

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪವಿದೆ. ನನ್ನ ಕ್ರಿಯಾಲೋಪವೇನೆಂದರೆ ನಿಲುವಳಿ ಸೂಚನೆಯನ್ನು ಮೂವ್ ಮಾಡಬೇಕಾದರೆ ನಿಯಮ ೫೯ರ ಕೆಳಗೆ ಮೂವ್ ಮಾಡಬೇಕಾಗುತ್ತದೆ. ಅದಕ್ಕೆ ಮಾನ್ಯ ಅಧ್ಯಕ್ಷರು ಕಮ್ಮ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ ಆಗ ತಾವು ಮಾತನಾಡಬಹುದು. ಆದರೆ ತಾವು ನಿಲುವಳಿ ಸೂಚನೆಯನ್ನು ರೂಲ್ ೬೩ರಲ್ಲಿ ತಂದಿದ್ದೀರಿ. Rule 63 says 'The Speaker, if he gives consent...'

(INTERRUPTION)

SRI K. B. KOLIWAD.—Sir, I am on my legs. It goes to show that the Speaker has not given the consent to move the adjournment motion Already the Finance Minister has been asked to keep the Report on the Table of the House. But the leader of the Opposition has started his discussion assuming that the consent has been given. When the Hon'ble Speaker has not given the consent the Leader of the Opposition cannot speak Therefore, I strongly raise an objection stating that the leader of the Opposition should not be permitted to argue about this matter. The matter has been closed and now therefore, the next subject in the Agenda should be taken up.

ಶ್ರೀ ಪಿ. ಜಿ. ಆರ್. ಸಿಂಧ್ಯಾ,—ಮಾನ್ಯ ಅಧ್ಯಕ್ಷರೇ ನಮ್ಮ ವಿರೋಧಪಕ್ಷದ ನಾಯಕರು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀ ಕೋಳಿವಾಡ್‌ರವರು ಹೇಳಿದರು. ಮಾನ್ಯ ಸದಸ್ಯರು ಈ ಸಭೆಗೆ ಮೂರನೆಯ ಸಲ ಗದ್ದು ಬರುತ್ತಿದ್ದಾರೆ. ಇದೇ ೬ ತಿಂಗಳ ಹಿಂದೆ ಆ ಕಡೆ ಕುಳಿತುಕೊಂಡಿರತಕ್ಕಂಥ ಮಾನ್ಯ ಸದಸ್ಯರು ಒಂದೊಂದು ನಿಲುವಳಿ ಸೂಚನೆ ತಂದಾಗ ೨-೩ ಗಂಟೆ ಚರ್ಚೆ ಮಾಡಿರತಕ್ಕಂಥ ಉದಾಹರಣೆಗಳು ಇವೆ

ಶ್ರೀ ಡಿ. ಬಿ. ಚಂದ್ರೇಗೌಡ.—ದಿನಗಟ್ಟಲೇ ಮಾತನಾಡಿದ್ದುದು ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರು ನನ್ನ ಪಕ್ಕದ ಸ್ಥಾನದಲ್ಲಿ ಕುಳಿತುಕೊಂಡು ಗಂಟೆಗಟ್ಟಲೆ ಚರ್ಚೆ ಮಾಡಿರತಕ್ಕಂಥಾದ್ದು ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಸನ್ಮಾನ್ಯ ಸಭಾನಾಯಕರು ಏನು ಹೇಳಿದ್ದಾರೆಂದರೆ ಇದರ ಬಗ್ಗೆ ಚರ್ಚೆ ಮಾಡಲು ಸರ್ಕಾರ ಸಿದ್ಧವಾಗಿದೆ. ನಾಳೆ ತಾವು ಇದನ್ನೇ ಗಮನ ಸೆಳೆಯುವ ಸೂಚನೆಯಾಗಿ ತನ್ನಿ. ಇದೇ ತರಹದ ಔದಾರ್ಯವನ್ನು ತಾವು ಆಗ ತೋರಿಸಿದ್ದರೆ ನಾವು ಗಂಟೆಗಟ್ಟಲೆ ಮಾತನಾಡತಕ್ಕಂಥ ಅವಶ್ಯಕತೆ ಇರಲಿಲ್ಲ ಮಾನ್ಯ ಸಭಾನಾಯಕರು ಚರ್ಚೆಗೆ ಒಪ್ಪಿಕೊಂಡಿದ್ದಾರೆ. ಚರ್ಚೆಗೆ ಸಿದ್ಧವಾಗಿದ್ದಾರೆ. ಚರ್ಚೆಯಾದ ಮೇಲೆ ಸರಿಯಾದ ಉತ್ತರ ಕೊಡಬೇಕಲ್ಲವೇ ? ಆದ್ದರಿಂದ ನಿಲುವಳಿ ಸೂಚನೆ ರೂಪದಲ್ಲಿ ಇದು ಇವತ್ತು ಬೇಡ ನಾಳೆ ತಾವು ಗಮನಸೆಳೆಯ ಬಹುದಾದ ಸೂಚನೆ ರೂಪದಲ್ಲಿ ತನ್ನಿ. ಸರ್ಕಾರ ಉತ್ತರ ಕೊಡಲು ಸಿದ್ಧವಾಗಿದೆ. ಸನ್ಮಾನ್ಯ ಸಭಾನಾಯಕರು ತಮ್ಮ ಕೆಲಸವನ್ನು ಬಹಳ ಸುಲಭ ಮಾಡಿದ್ದಾರೆ. ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಬಾರದೆಂದು ಏನೂ ಹೇಳಿಲ್ಲ, ಅದಕ್ಕೆ ಅವರು ಆಕ್ಷೇಪಣೆ ಏನೂ ಮಾಡಿಲ್ಲ. ಈ ವಿಚಾರವನ್ನೇ ಗಮನ ಸೆಳೆಯುವ ಸೂಚನೆ ರೂಪದಲ್ಲಿ ತನ್ನಿ ಎಂದು ಹೇಳಿದ್ದಾರೆ, ಕ್ಯಾಬಿನೇಟ್ ಮಾಡಿರತಕ್ಕಂಥ ನಿರ್ಣಯ ಆ ಬಗ್ಗೆ ನಾವೆಷ್ಟಿವಿವರ ಕೊಡಬೇಕಾಗುತ್ತದೆ.

ನಿಲುವಳಿ ಸೂಚನೆ ಇವತ್ತು ಬಂದಿದೆ. ನಾಳೆ ತಾವು ಗಮನ ಸೆಳೆಯುವ ಸೂಚನೆ ರೂಪದಲ್ಲಿ ತನ್ನಿ. ಸರ್ಕಾರವಿಯಾದ ಉತ್ತರ ಕೊಡಲು ಸಿದ್ಧವಾಗಿದೆ. ಕ್ಯಾಬಿನೇಟ್ ನಿರ್ಣಯ ಸ್ಪಷ್ಟವಾಗಿದೆ. ಅದನ್ನು ನಾವು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಆದ್ದರಿಂದ ನಿಲುವಳಿ ಸೂಚನೆಯ ಪ್ರಶ್ನೆಯೇ ಇಲ್ಲಿ ಉಧ್ಭವವಾಗುವುದಿಲ್ಲವೆನ್ನುವುದೇ ನಮ್ಮ ಪ್ರಾರ್ಥನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಕಡೆ ಕುಳಿತುಕೊಂಡು ನಾವು ಈ ಮಾತನ್ನು ಏತಕ್ಕೆ ಹೇಳಬೇಕಾಗುತ್ತದೆ ಎಂದರೆ ಸದನದಲ್ಲಿ ಬರತಕ್ಕಂಥ ವಿಚಾರಗಳ ಬಗ್ಗೆ ರಾಜ್ಯದ ಜನ ಗಮನಿಸಿದ್ದು ವಿರೋಧಪಕ್ಷದವರು ಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದಾರೋ ಅಥವಾ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದಾರೋ ಎಂದು ನೋಡುತ್ತಿರುತ್ತಾರೆ ಆದ್ದರಿಂದ ನಾವು ಈ ಸದನದ ಸಮಯವನ್ನು ಒಂದು ನಿಮಿಷವೂ ಅನಗತ್ಯವಾಗಿ ತೆಗೆದುಕೊಳ್ಳಲು ತಯಾರಿಲ್ಲ. ಮಾನ್ಯ ಸಭಾನಾಯಕರು ನಿನ್ನೆ ಒಳ್ಳೆಯ ಮಾತುಗಳನ್ನು ಹೇಳಿದರು ಆಗ ಮಾನ್ಯ ಸಭಾನಾಯಕರಿಗೆ ನಾವು ಸಹ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಅವರು ನಿಜವಾಗಿ ಒಬ್ಬ ಪ್ರಜಾಪ್ರಭುತ್ವ ಪ್ರೇಮಿಯ ರೀತಿಯಲ್ಲಿ ನಡೆದುಕೊಂಡು ಬಂದಿದ್ದಾರೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ.ಅವರು ನಿನ್ನೆ ಒಂದು ಮಾತನ್ನು ಹೇಳಿದರು ಅದೇನೆಂದರೆ ನಾನು ಬರೀ ಸಂಖ್ಯೆ ಮೇಲೆ ನಿರ್ಣಯ ತೆಗೆದುಕೊಳ್ಳುವುದಿಲ್ಲ ಒಂದು ವಿಷಯದ ಮೆರಿಟ್ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಅದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ.

ಈ ವಿಷಯಕ್ಕೆ ಎಷ್ಟೊಂದು ಪಬ್ಲಿಕ್ ಇಂಪಾರ್ಟೆನ್ಸ್ ಇದೆ, ಇದಕ್ಕೆ ಎಷ್ಟು ಮಹತ್ವ ಇದೆ ಎಂದು ತಮಗೆ ತಿಳಿಸಲಿಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೆ ಅದಕ್ಕೆ ಸಹಿ ಹಾಕಿರುವ ಮೂರ್ನಾಲ್ಕು ಜನರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇವೆ. ಇದಕ್ಕೆ ಇವತ್ತೇ ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಂದು ವಿಚಾರವನ್ನು ಶ್ರೀಮಾನ್ ಮೊಯಿಲಿಯವರು ಹೇಳಿದರು ಅವರು ಔದಾರ್ಯದ ವಿಚಾರ ಮಾತನಾಡಿದರು. ನಿಮ್ಮ ಔಧಾರ್ಯದ ಮೇಲೆ ಕೆಲಸ ಮಾಡಲಿಕ್ಕೆ ನಾವು ಇಲ್ಲಿ ಬಂದಿಲ್ಲ. ನಮ್ಮ ಹಕ್ಕಿನ ಮೇಲೆ ಕೆಲಸ ಮಾಡಲಿಕ್ಕೆ ನಾವು ಬಂದಿದ್ದೇವೆ. ಆದ್ದರಿಂದ ಇಲ್ಲಿ ಔಧಾರ್ಯದ ಮಾತುಗಳು ಬೇಡ. ನಿಮ್ಮ ಔಧಾರ್ಯ ನಮಗೆ ಬೇಕಾಗಿಲ್ಲ. ಜನಗಳು ನಮಗೆ ಔದಾರ್ಯ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ತಮ್ಮ ವಾದ ನವಂಗೆ ಅರ್ಥವಾಗುತ್ತದೆ. ಅವರುಗಳನ್ನು ತೆಗೆದುಕೊಳ್ಳುವಾಗ ಅಕ್ರಮಗಳು ನಡೆದಿರಬಹುದು, ಅನ್ಯಾಯಗಳು ಆಗಿರಬಹುದು, ಅವರುಗಳನ್ನು ಕನ್‌ಫರ್ಮ್ ಮಾಡಿ ಎಂದು ನೀವು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏನು ಅಕ್ರಮ ನಡೆದಿದೆ ?

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ಏಕೆ ಬೀದಿಪಾಲಾಗುತ್ತಾರೆ ?

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ನಿಮ್ಮ ಸರ್ಕಾರ ಇದ್ದಾಗ ನೀವು ಮಾಡಿದಂಥ ಕೆಲವು ಆರ್ಡರ್‌ಗಳನ್ನು ತೆಗೆದುನೋಡಿ, ಮಾಡಬಾರದ್ದೆಲ್ಲಾ ಮಾಡಿದ್ದೀರಿ. ಈಗ ತಾವು ಹೇಳುತ್ತಿದ್ದೀರಿ,

(ಗೊಂದಲ)

ಶ್ರೀ ಪಿ. ಜಿ. ಆರ್, ಸಿಂಧ್ಯ.—ನಿಮಗೆ ಜನ ಅಧಿಕಾರ ಕೊಟ್ಟಿದ್ದಾರೆಂದು ಇಲ್ಲಿ ಬೇಜವಾಬ್ದಾರಿಯಿಂದ ಮಾತನಾಡಬೇಡಿ

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮಾನ್ಯ ಹನುಮೇಗೌಡರು ಮಾತನಾಡುತ್ತಾ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಕ್ರಮಗಳು ಎಂದರೆ ಏನರ್ಥ ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ಅವರು ಉಪಯೋಗಿಸಿರುವ ಅಕ್ರಮ ಎನ್ನುವ ಪದವನ್ನು ಕಡತದಿಂದ ತೆಗೆಸಿ ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಅವರು ಉಪಯೋಗಿಸಿರುವ ಬೇಜವಾಬ್ದಾರಿ ಎನ್ನುವ ಪದವನ್ನೂ ಕಡತದಿಂದ ತೆಗೆಸಿಹಾಕಬೇಕು.

ಅಧ್ಯಕ್ಷರು.—ಅನಾವಶ್ಯಕವಾದ ವಿಚಾರಗಳಲ್ಲಿ ಚರ್ಚೆ ಹರಿದುಹೋಗುವುದಕ್ಕೆ ಬಿಡತಕ್ಕಂಥದು ಸರಿಯಲ್ಲ, ನಿಲುವಳಿ ಸೂಚನೆಯನ್ನು ಅಂಗೀಕಾರ ಮಾಡುವ ಸೀಮಿತವಾದ ಪ್ರಶ್ನೆ ಸದನದ ಮುಂದೆ ಇದೆ. ಈ ನಿಲುವಳಿ ಸೂಚನೆಯು ಅಂಗೀಕಾರಾರ್ಹವೋ ಅಲ್ಲವೋ ಎಂದು ತೀರ್ಮಾನ ಮಾಡತಕ್ಕದ್ದು ನಾನು. ತೀರ್ಮಾನ ಮಾಡುವ ಮುನ್ನ ಯಾರು ಈ ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೋ ಅವರಿಗೆ ಮಾತನಾಡುವುದಕ್ಕೆ ಒಂದು ಅವಕಾಶ ಕೊಡುತ್ತೇನೆ. ಆ ಅವಕಾಶವನ್ನು ಉಪಯೋಗಿಸತಕ್ಕಂಥ ವೇಳೆಯಲ್ಲಿ ವಿಚಾರದ ಮೆರಿಟ್ಸ್ ಬಗ್ಗೆ ಹೋಗದ ಕೇವಲ ಸಂಕ್ಷಿಪ್ತವಾಗಿ ಅವರ ವಿಚಾರವನ್ನು ಧೋರಣೆಯನ್ನು ಹೇಳತಕ್ಕಂಥದ್ದು ನ್ಯಾಯ. ನೀವು ಚರ್ಚೆ ಮಾಡಲಿಕ್ಕೆ ಪ್ರಾರಂಭ ಮಾಡಲಿಕ್ಕೆ ಶುರು ಮಾಡಿದರೆ (ವಿರೋಧ ಪಕ್ಷದವರನ್ನು ಉದ್ದೇಶಿಸಿ) ಪ್ರತಿರೋಧ ಬರುತ್ತದೆ, ಅನಗತ್ಯ ಚರ್ಚೆ ಬರುತ್ತದೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸೂಚನೆ ಕೊಡುವುದೇ ನೆಂದರೆ, ಈಗಾಗಲೇ ಮಾನ್ಯ ಸಭಾ ನಾಯಕರೂ ಕೂಡ ಹೇಳಿದ್ದಾರೆ, ಇದನ್ನು ನಾಳೆ ಗಮನ ಸೆಳೆಯುವ ಸೂಚನೆ ಮುಖಾಂತರ ತೆಗೆದುಕೊಳ್ಳುವುದಕ್ಕೆ ನನ್ನ ಅಭ್ಯಂತರವೂ ಇಲ್ಲ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಕೊಟ್ಟ ನಿರ್ಣಯದ ವಿರುದ್ಧ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಗಲೇ ಅವರು ಚಪ್ಪಾಳೆ ತಟ್ಟುತ್ತಿದ್ದಾರೆ. ಬಹುಮತ ಸಿಕ್ಕಿಬಿಟ್ಟಿದೆ, ಏನು ಮಾಡಿದರೂ ನಡೆಯುತ್ತದೆಂದು...

(ಗೊಂದಲ)

ಶ್ರೀ ಪಿ. ಜಿ. ಆರ್, ಸಿಂಧ್ಯ.—ಪ್ರಜಾಪ್ರಭುತ್ವದ ಸಂಪ್ರದಾಯಗಳ ಬಗ್ಗೆ ಮಾತನಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವುಗಳು ದಯಮಾಡಿ ಕುಳಿತುಕೊಳ್ಳಬೇಕು, ಮಾನ್ಯ ಯಡಿಯೂರಪ್ಪನವರಿಗೆ ನಾನು ಹೇಳುವುದೇನೆಂದರೆ, ಚಪ್ಪಾಳೆ ತಟ್ಟುತಕ್ಕದ್ದು, ಮೇಜು ಕುಟ್ಟತಕ್ಕದ್ದು ಪಾರ್ಲಿಮೆಂಟರಿಯ ಸಂಪ್ರದಾಯ.

ಅಧ್ಯಕ್ಷರು.—ದಯವಿಟ್ಟು ತಾವುಗಳು ಕುಳಿತುಕೊಳ್ಳಿ ಬೇಕು.....

(ಗೊಂದಲ)

ಅಧ್ಯಕ್ಷರು.—ಸನ್ಮಾನ್ಯ ಯಡಿಯೂರಪ್ಪನವರಿಗೆ ನಾನು ಹೇಳತಕ್ಕಂಥಾದ್ದು ಏನೆಂದರೆ, ಸದನದಲ್ಲಿ ಚಪ್ಪಾಳೆ ತಟ್ಟತಕ್ಕಂಥಾದ್ದು, ಮೇಜು ಕುಟ್ಟತಕ್ಕಂಥಾದ್ದು ಪಾರ್ಲಿಮೆಂಟರಿ ಸಂಪ್ರದಾಯ. ಹಾಗೆ ನೀವೂ ಕೂಡ ಕುಟ್ಟಬಹುದು, ಅವರೂ ಕುಟ್ಟಬಹುದು.

ಶ್ರೀ ಎಂ ಮಹದೇವ,—ಕರ್ನಾಟಕದ ಜನತೆಯು ನಮಗೆ ಚಪ್ಪಾಳೆ ತಟ್ಟುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ತಾವುಗಳು ಕೊಟ್ಟಂಥ ತೀರ್ಪಿಗೆ ತಲೆ ಬಾಗುತ್ತೇನೆ. ಆದರೆ ಈ ಸದನದಲ್ಲಿ ಮಾನ್ಯ ಸದಸ್ಯರಾದ ಹನುಮೇಗೌಡರು ಶಿಕ್ಷಕರ ವಿಚಾರದಲ್ಲಿ ನೇಮಕ ಮಾಡುವಾಗ ಅಕ್ರಮ ನಡೆದಿದೆ, ಅನ್ಯಾಯ ನಡೆದಿದೆ ಎಂದು ಹೇಳಿದ್ದಾರೆ. ಆದರೆ ನಾನು ಆ ಮಾತುಗಳನ್ನು ಹೇಳಲಿಲ್ಲ. ಅವರು ಆ ರೀತಿಯಲ್ಲಿ ಊಹಿಸಿಕೊಂಡು ಹೇಳಿದ್ದಾರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಶಿಕ್ಷಕರ ನೇಮಕದ ವಿಚಾರದಲ್ಲಿ ಕೆಲವೊಂದು ತಾಂತ್ರಿಕ ದೋಷಗಳು ಇವೆ ಎಂದು ಹೇಳಿದ್ದೇನೆಯೇ ಹೊರತು ಅಕ್ರಮಗಳು ಆಗಿವೆ ಎಂದು ನಾನು ಹೇಳಲಿಲ್ಲ. ಆ ಕುರಿತು ಏನೇನು ನಡೆದಿದೆ ಎಂದು ಚರ್ಚೆ ನಡೆಯುವ ಸಮಯದಲ್ಲಿ ಚರ್ಚೆ ಮಾಡೋಣ.

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ತಂದಂಥ ಈ ಪ್ರಸ್ತಾವನ್ನು ನಾಳೆಗೆ ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡುತ್ತೇನೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಪ್ರಸಾಪ ಮಾಡಲಿಚ್ಚಿಸುವ ವಿಚಾರ ಏನೆಂದರೆ...ಮತ್ತು ಆ ಕುರಿತು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಿಲುವಳಿ ಸೂಚನೆ ಗಳಾಗುವುದಕ್ಕೆ ೩-೪ ವಿಷಯಗಳು ಬಂದಾಗ, ಅವುಗಳಲ್ಲಿ ಯಾವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡ ಬೇಕೆಂಬುದನ್ನು ಮತ್ತು ಯಾವುದಕ್ಕೆ ಹೆಚ್ಚಿನ ಮಹತ್ವ ಇದೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಈ ರಾಜ್ಯದ ಮೂರು ಕೋಟಿ ರೈತರಿಗೆ ಸಂಬಂಧಪಟ್ಟಂಥ ಪ್ರಸ್ತಾವನ್ನು ತಮ್ಮ ಮುಂದಿಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಬೇಕೆಂದಿದ್ದೇನೆ.

ಅಧ್ಯಕ್ಷರು.—ತಾವು ಪ್ರಸ್ತಾಪಿಸಲಿರುವ ವಿಚಾರ ಏನೆಂದು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾ ನಾಯಕರು ಮಾತ ನಾಡುತ್ತಾ, ಪತ್ರಿಕೆಗಳಲ್ಲಿ ಬಂದಂಥ ವರದಿಗಳನ್ನು ಆಧಾರವಾಗಿಟ್ಟುಕೊಂಡು ಸತ್ಯಾಸತ್ಯಗಳು ಏನಿವೆ ಎಂದು ತಿಳಿದುಕೊಂಡು ಮಾತನಾಡಬೇಕೆಂದು ಹೇಳಿದ್ದಾರೆ. ಈ ರಾಜ್ಯದಲ್ಲಿ, ದೇಶದಲ್ಲಿ ಆದಂಥ ಅನ್ಯಾಯಗಳನ್ನು, ಅವ್ಯವಹಾರಗಳನ್ನು ಈ ಸದನದಲ್ಲಿರುವಂಥ ಸದಸ್ಯರಿಗೆ ದಾಖಲೆಗಳ ಮೂಲಕ ಸಿಗದಿದ್ದಾಗ ಪ್ರತಿಕಾ ವರದಿಗಳನ್ನು ಅವಲಂಬಿಸಬೇಕಾಗುತ್ತದೆ. ಪತ್ರಿಕಾ ರಂಗದವರು ಈ ವಿಚಾರ ಗಳನ್ನು ಹುಡುಕಿಕೊಂಡು ಅವುಗಳನ್ನು ಬೆಳಕಿಗೆ ತಂದಿದ್ದಾರೆ. ಮಾನ್ಯಶ್ರೀ ವೀರಪ್ಪ ಮೊಯಿಲಿ ಯವರು ಪತ್ರಿಕಾ ಗೋಷ್ಠಿಯಲ್ಲಿ ಏನು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದ ಮೇಲೆ ಅದರ ಕಾರಣಗಳಿಂದಾಗಿಯೇ ಸಂಬಂಧಪಟ್ಟ ಶಿಕ್ಷಕರುಗಳು ಆತಂಕಗೊಂಡು ಬೆಂಗಳೂರಿಗೆ ಬಂದಿದ್ದಾರೆ. ಹಾಗಾದರೆ ಪತ್ರಿಕಾ ವರದಿ ಬಂದುದರಿಂದ ಈ ಅನಾಹುತವಾಗಿದೆಯೆ ?

ಅಧ್ಯಕ್ಷರು.—ಮಾನ್ಯ ಸಭಾ ನಾಯಕರು ಪತ್ರಿಕೆಗಳಲ್ಲಿ ಬಂದುದನ್ನು ಆಧಾರವಾಗಿ ಮಾಡಿ ಕೊಂಡಿರುವ ವಿಚಾರದಲ್ಲಿ ತಪ್ಪನ್ನು ಕಂಡುಕೊಂಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈ ರಾಜ್ಯದ ಸುಮಾರು...

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳಂಹಿಸಿದ್ದೇನೆ. ಅದರ ವಿಚಾರದಲ್ಲಿ ಮಾತನಾಡ ಬಯಸುತ್ತೇನೆ...

ಒಬ್ಬ ಮಾನ್ಯ ಸದಸ್ಯರು.—ನಿಮಗೆ ಅವಕಾಶ ಕೊಡುವುದಿಲ್ಲ...ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಹೀಗೆ ಮಾತನಾಡುವ ಕಾಂಗ್ರೆಸ್ ಸದಸ್ಯರನ್ನು ಸ್ವಲ್ಪ, ಕಂಟ್ರೋಲ್ ಮಾಡಬೇಕಾಗುತ್ತದೆ...

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಸದಸ್ಯರು ಹೀಗೆ ಮಾತನಾಡಿದರೆ ಅದು ಅತಿರೇಕದ ಪರಮಾವಧಿಯಾಗುತ್ತದೆ...

ಅಧ್ಯಕ್ಷರು.—ಮಾನ್ಯ ಸದಸ್ಯರುಗಳವರು ಸಂಸದೀಯ ಶಿಷ್ಟಾಚಾರದ ಚೌಕಟ್ಟಿನಲ್ಲಿ ಮಾತನಾಡಬೇಕಾಗುತ್ತದೆ. ಇಲ್ಲವಾದಲ್ಲಿ ಅದು ಅನಗತ್ಯವಾದ ಚರ್ಚೆಗೆ ಅವಕಾಶವನ್ನು ಸೃಷ್ಟಿಸುತ್ತದೆ. ಒಬ್ಬರು ಮಾತನಾಡುವಾಗ ಮತ್ತಿತರರು ಮಾತನಾಡತಕ್ಕಂಥಾದ್ದು ಸಾಧುವಲ್ಲ. ಯಾರನ್ನು ಕೂರಿಸಬೇಕು, ಯಾರನ್ನು ನಿಲ್ಲಿಸಬೇಕು ಎಂಬುದನ್ನು ನಿರ್ಧರಿಸತಕ್ಕಂಥ ಅಧಿಕಾರವನ್ನು ನೀವು ನನಗೆ ಕೊಟ್ಟಿದ್ದೀರಿ. ಆದುದರಿಂದ ಎಲ್ಲರೂ ದಯವಿಟ್ಟು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ನಾನು ಹೇಳುವುದೂ ಅದನ್ನೇ. ತಮ್ಮ ಗಮನವನ್ನು ಸೆಳೆಯಲು ಮತ್ತು ತಮ್ಮಿಂದ ಪರವಾನಿಗೆ ಪಡೆಯಲು ಎದ್ದು ನಿಂತಿದ್ದೇನೆ. ಆದರೆ ಕೊಡುವುದಿಲ್ಲ ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಇವರು ಯಾರು ? ದಯವಿಟ್ಟು ಇದರ ಬಗ್ಗೆ ತಾವು ತೀರ್ಪು ಹೇಳಬೇಕು. ಇವರು ಯಾರು ? ಸ್ವಾಮಿ ತಾವು ಹೇಳಿದ್ದನ್ನೇ ನಾನೂ ಹೇಳಿದ್ದು. ಈಗ ವಿಚಾರವೇನೆಂದರೆ ಇವತ್ತು ರಾಜ್ಯದಲ್ಲಿ ಶೇಮುವಾದಂಥ ರಾಜ್ಯದ ಜನತೆ ಅನುಭವಿಸುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ರೈತರ ಆನಾನುಕೂಲತೆಗಳು ತುತ್ತ ತುದಿ ಮುಟ್ಟಿವೆ, ಪ್ರತಿ ತಾಲ್ಲೂಕಿನಲ್ಲೂ ಕೂಡ ಬರಗಾಲಪೀಡಿತ ಅಥವಾ ಬಯಲು ಸೀಮೆಯ ಕೆಲವು ಜಿಲ್ಲೆಗಳಲ್ಲಿ ೨೦೦ ರಿಂದ ೩೦೦ ಐಪಿ ಸೆಟ್ಟುಗಳಿಗೆ ಕಳೆದೆರಡು ವರ್ಷಗಳಿಂದ ವಿದ್ಯುತ್ತನ್ನು ಸರಬರಾಜು ಮಾಡಿಲ್ಲ. ಈಗ ಯಾವರೀತಿ ಸರಬರಾಜಾಗುತ್ತಿದೆ ಎಂದರೆ ಮುನ್ನೂರು ನಾನೂರು ವೋಲ್ಟೇಜ್ ಇರಬೇಕಾದ ಕಡೆ ೧೦೦–೨೦೨ ವೋಲ್ಟೇಜ್ ಮಟ್ಟಕ್ಕೆ ಬಂದಿದೆ, ಇದರಿಂದ ಲಕ್ಷಾಂತರ ರೈತರು....

ಅಧ್ಯಕ್ಷರು.—ಈಗ ಸುಸದೀಯ ಸಚಿವರು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಬಹುತಃ ತಮಗೆ ನಿಲುವಳಿ ಸೂಚನೆ ಕೊಟ್ಟಿದ್ದರ ಆಧಾರದ ಮೇಲೆ ಹೀಗೆಂದು ಹೇಳಿರಬಹುದು. ಏಕೆಂದರೆ ರೂಲ್ ೬೧ ಬಹಳ ಸ್ಪಷ್ಟವಾಗಿದೆ. ಇದರಲ್ಲಿ ೬೧ (೧)ರ ಪ್ರಕಾರ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಗಳನ್ನು ಕೊಡತಕ್ಕಂಥಾದ್ದು "not more than one such motion shall be made at the same sitting." ಪ್ರಸ್ತಾಪ ಮಾಡಲಿಕ್ಕೂ ಕೂಡ ನಿಯಮದಲ್ಲಿ ಸೀಮಿತವಾಗಿದೆ. ವಿರೋಧಪಕ್ಷದ ನಾಯಕರಿಗೆ ಒಂದು ನಿಲುವಳಿ ಸೂಚನೆ ಮಂಡಿಸಲು ತಾವು ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ಈ ದಿವಸ ಒಂದಕ್ಕಿಂತ ಜಾಸ್ತಿ ಪ್ರಸ್ತಾಪ ಮಾಡಲು ಅವಕಾಶವಿರುವುದಿಲ್ಲ, ಹಾಗೆಂದರೆ ಸರ್ಕಾರ ಆಕ್ಷೇಪಿಸುತ್ತಿದೆ, ಉತ್ತರ ಕೊಡಲು ಹಿಂದೇಟು ಹಾಕುತ್ತಿದೆ ಎಂದು ತಿಳಿದುಕೊಳ್ಳಬಾರದು. ಇದೇ ವಿಷಯವನ್ನು ಬೇರೆ ರೀತಿಯಲ್ಲಿ ಅವರು ತರಲಿ, ಉತ್ತರಿಸಲು ಸರ್ಕಾರ ಸಿದ್ಧವಾಗಿದೆ. ಪ್ರಾರಂಭದ ಈ ದಿವಸವೇ ನಿಯಮಾವಳಿಯನ್ನು ಉಲ್ಲಂಘನೆ ಮಾಡುತ್ತಾ ಹೋದರೆ ಮುಂದೆ ಸತ್ಸಂಪ್ರದಾಯಗಳನ್ನು ಹಾಕಲು ತೊಂದರೆಯಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.—ಇವತ್ತು ನಾವು ಒಪ್ಪಿಕೊಂಡಷ್ಟು ಬೇಗನೆ ಮೊಯಿಲಿಯವರು ಹಿಂದೆ ಎಂದೂ ಒಪ್ಪಿರಲಿಲ್ಲ.

ಶ್ರೀ ಸಿ. ಬೈರೇಗೌಡ.—ಒಂದಕ್ಕಿಂತ ಜಾಸ್ತಿ ಪ್ರಸ್ತಾಪ ಮಾಡಬಾರದೆಂದು ಕಾನೂನೇನೂ ಇಲ್ಲ. ಅದು ಒಪ್ಪಿಗೆ ಕೊಡುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೇ ಹೊರತು ಪ್ರಸ್ತಾಪ ಮಾಡಲು ಅನ್ವಯವಾಗಲಾರದು. ಒಂದೇ ಸಲ ಹತ್ತಾರು ನಿಲುವಳಿ ಸೂಚನೆಗಳು ಪ್ರಸ್ತಾಪವಾಗಿರುವುದು ಅನಂತರ ಚರ್ಚೆಗೆ ಒಪ್ಪಿಗೆಯಾಗಿರುವುದೋ ತಿರಸ್ಕೃತವಾಗಿರುವುದೋ ನಿದರ್ಶನಗಳು ಬೇಕಾದಷ್ಟು ಇವೆ. ಆದ್ದರಿಂದ ಈಗಿರುವ ವಿಚಾರವೆಂದರೆ ಅದು ರಾಜ್ಯದ ಪ್ರತಿಯೊಬ್ಬನಿಗೂ ಅನಾನುಕೂಲವಾಗಿದ್ದು ಸಾರ್ವಜನಿಕ ಮಹತ್ವದ ವಿಚಾರ. ಇದಕ್ಕೂ ಅವಕಾಶ ಇಲ್ಲವೆಂದರೆ ಅಡ್ಡ ಬರುವ ನಿಯಮವನ್ನೇ ತಾತ್ಕಾಲಿಕವಾಗಿ ತಡೆಹಿಡಿಯುವುದಕ್ಕೆ ತಮಗೆ ಅವಕಾಶ ಇದೆ. ಅಧ್ಯಕ್ಷರೇ, ತಾವೂ ರೈತವರ್ಗದಿಂದ ಬಂದವರು, ರಾಜ್ಯದಲ್ಲಿರುವ ಕೈಗಾರಿಕೆಗಳು ಅವುಗಳ ಕಾರ್ಮಿಕನಿಗೂ ಇದು ಸಂಬಂಧಪಟ್ಟ ವಿಚಾರ ಆದ್ದರಿಂದ ತಮ್ಮ ಅಧಿಕಾರವನ್ನು ಬಳಸಿ.

ಅಧ್ಯಕ್ಷರು.—೬೧ನೇ ನಿಯಮ ಏನಿದೆ ಅದು ನೀವು ಕಳುಹಿಸಿರುವ ನಿಲುವಳಿ ಸೂಚನೆಗೆ ಹೊಂದಿ ಕೊಳ್ಳತಕ್ಕಂಥಾದ್ದು. ನೀವು ನನ್ನನ್ನು ಭೇಟಿ ಮಾಡಿ, ನಂತರ ತೀರ್ಮಾನ ಮಾಡಬಹುದು.

ಶ್ರೀ ಸಿ. ಬೈರೇಗೌಡ.—ಸರಕಾರ ಒಪ್ಪುವುದಾದರೆ ಇದಕ್ಕೆ ಪರಿಹಾರವನ್ನೂ ಕೂಡ ನಾನೇ ಸೂಚನೆ ಮಾಡುತ್ತೇನೆ. ಈ ವಿಚಾರದಲ್ಲಿ ಆಳವಾಗಿ ಅಭ್ಯಾಸ ಮಾಡಿ ವರದಿಯನ್ನು ಕೊಡುವುದಕ್ಕೆಂದು ಹಿಂದಿನ ಸರಕಾರ ಸದನದ ಸಮಿತಿಯನ್ನು ರಚನೆ ಮಾಡಿತ್ತು. ನಂತರ, ವಿಧಾನ ಸಭೆ ವಿಸರ್ಜನೆಯಾಯಿತಂ ಅದೂ ಕೂಡ ಅಲ್ಲಿಗೆ ನಿಂತಿತು. ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಇವನ್ನು ನಾನು ಹೇಳುತ್ತಿಲ್ಲ. ಈಗ ಇರತಕ್ಕಂತಹ ಸಮಸ್ಯೆಯನ್ನು ಬಗೆಹರಿಸಬೇಕು ರೈತರಿಗೆ ಆಗಿರತಕ್ಕಂತಹ ಅನ್ಯಾಯ ಮತ್ತು ಆಗುತ್ತಿರತಕ್ಕಂತಹ ತೊಂದರೆಯನ್ನು ಬಗೆಹರಿಸಬೇಕಾದುದು ಸರಕಾರದ ಮತ್ತು ನಮ್ಮ ಕರ್ತವ್ಯವಾಗಿದೆ. ಇದರ ಬಗ್ಗೆ ನಾವು ಸರಕಾರಕ್ಕೆ ಸಹಕಾರ ಕೊಡಲು ತಯಾರಿದ್ದೇವೆ. ಇದರ ಬಗ್ಗೆ ಸದನದ ಸಮಿತಿಯನ್ನು ಮಾಡುವುದಾದರೆ ಅನಾವಶ್ಯಕವಾದಂತಹ ಚರ್ಚೆಯನ್ನು ಮಾಡುವುದಕ್ಕೆ ನಾನು ತಯಾರಿಲ್ಲ. ಒಟ್ಟಿನಲ್ಲಿ ನಮಗೆ ಇರತಕ್ಕಂತಹ ಸಮಸ್ಯೆ ಬಗೆಹರಿಯಬೇಕು ಸದನದ ಸಮಿತಿಯನ್ನು ಮಾಡಲಿಕ್ಕೆ ಸರಕಾರ ಒಪ್ಪಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(3) ರಾಜ್ಯದ ರೈತರ ಕೃಷಿ ಸಾಲವನ್ನು ಮನ್ನಾ ಮಾಡುವ ಬಗ್ಗೆ

† ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರಾಜ್ಯದ ಸುಮಾರು ಮೂರು ಕೋಟಿ ಜನಕ್ಕೆ ಸಂಬಂಧಪಟ್ಟ ಹಾಗೆ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳಿಸಿಕೊಟ್ಟಿದ್ದೇನೆ. ಪ್ರಾರಂಭದಲ್ಲೇ ನಾನು ಇದರ ಬಗ್ಗೆ ತಮ್ಮಲ್ಲಿ ಪ್ರಾರ್ಥನೆ ಮಾಡಿದೆ. ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ ನಾನು ಯಾವ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ ಮತ್ತು ಆದರಲ್ಲಿ ಯಾವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ ಆ ಒಂದು ವಿಷಯದಲ್ಲಿ ಈ ಸದನದ ಸದಸ್ಯರೆಲ್ಲರಿಗೂ ಆಸಕ್ತಿ ಇದೆಯೆಂದು ನಾನು ಭಾವಿಸಿದ್ದೇನೆ. ಸುಮಾರು ಮೂರು ಕೋಟಿ ರೈತರಿಗೆ ಸಂಬಂಧ ಪಟ್ಟಂತಹ ವಿಷಯ ಇದು. ಈ ಸದನ ಸೇರುವುದರ ಒಳಗಾಗಿ ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಬೇರೆ ರಾಜ್ಯದ ಮುಖ್ಯ ಮಂತ್ರಿಗಳು ಅಲ್ಲಿರುವಂತಹ ಕೃಷಿ ಸಾಲವನ್ನು ಯಾವ ರೀತಿ ಮನ್ನಾ ಮಾಡುವುದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆಯೋ ಅದೇ ರೀತಿಯ ತೀರ್ಮಾನವನ್ನು ರೈತರ ಹಿತದೃಷ್ಟಿಯಿಂದ ತೆಗೆದುಕೊಳ್ಳುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೇವು. ಆದರೆ ತಾವು ಮಾಡಲಿಲ್ಲ, ಈಗಲೂ ಕೂಡ ಕಾಲ ಮೀರಿಲ್ಲ. ತಮಗೆ ಗೊತ್ತಿರುವ ಹಾಗೆ ಹಿಮಾಚಲ ಪ್ರದೇಶದಲ್ಲಿರುವಂತಹ ರೈತರ ಕೃಷಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಅಲ್ಲಿ ಕಾಂಗ್ರೆಸ್ ಸರಕಾರ ಇದೆ. ಮತ್ತು ಬಿಹಾರದಲ್ಲಿ ೧೫,೦೨೦ ಕ್ಕಿಂತ ಒಳಗಡೆ ಇರತಕ್ಕಂತಹ ಕೃಷಿ ಸಾಲವನ್ನು ಮನ್ನಾ ಮಾಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ಒರಿಸ್ಸಾದಲ್ಲಿ, ಕೂಡ ಸಾಲ ಮನ್ನಾ ಮಾಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ಡಿಸೆಂಬರ್ ಒಳಗಾಗಿ ಅವರು ತೆಗೆದುಕೊಂಡಿರುವಂತಹ ಕೃಷಿ ಸಾಲವನ್ನು ಮರು ಪಾವತಿ ಮಾಡುವಂತಹ ಸಂದರ್ಭ ಈಗ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಕೃಷಿ ಸಾಲವನ್ನು ಮನ್ನಾ ಮಾಡಬೇಕೆಂದು ಯೋಚನೆ ಮಾಡುವಂಥಾದ್ದು ಇದೆ. ಕರ್ನಾಟಕ ಸರಕಾರ ಕೂಡ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಕೇಂದ್ರ ಸರಕಾರದ ನೆರವೂ ಸಿಗುವಂತಹ ಸಂದರ್ಭ ಇದೆ. ಅತಿವೃಷ್ಟಿ, ಅನಾವೃಷ್ಟಿಗೆ ರೈತರು ಬಲಿಯಾಗಿದ್ದಾರೆ ತಮ್ಮ ಸಾಲ ಮನ್ನಾ ಆಗುತ್ತದೆಂದು ಅವರು ಆಸೆ ಇಟ್ಟುಕೊಂಡಿದ್ದಾರೆ. ತಮಗೆ ಇಷ್ಟು ಬಹುಮತ ಬರಲು ಕಾರಣವೇನೆಂದರೆ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ತಾವು ಹೇಳಿದ್ದೀರಿ ಅದಕ್ಕೋಸ್ಕರ ತಮಗೆ ಇಷ್ಟು ಬಹುಮತ ಬಂದಿದೆ.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್.—ನನ್ನದು ಒಂದು ಕ್ರಿಯಾಲೋಪ ಇದೆ.

(ಗೊಂದಲ)